ವಿಚಾರಣಾ ವರದಿಯನ್ನು ಪರಿಶೀಲಿಸಿ ತನಿಖೆಯಲ್ಲಿ ಕರ್ತವ್ಯಲೋಪ ವೆಸಗಿರುವುದು ಪೂರ್ವಭಾವಿ ವಿಚಾರಣೆಯಿಂದ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸದರಿ ಪಿ.ಎಸ್.ಐ. ರವರನ್ನು ದಿನಾಂಕ: 01.07.2014ರಂದು ಅಮಾನತ್ತಿನಲ್ಲಿಟ್ಟು ಆದೇಶಿಸಲಾಗದೆ.

ಪ್ರಕರಣದ ತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸುತ್ತಿದ್ದು ಆರೋಪಿತರ ವಿರುದ್ಧ ಕಾನೂನಿನ ಅನ್ವಯ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು. ನಿರಪರಾಧಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಕೃಷ್ಣಪ್ಪನವರು ಈ ವಿಚಾರವನ್ನು ಎತ್ತಿದ್ದಾರೆ. ಮೊಹೀದ್ದೀನ್‌ಸಾಬ್ ಮತ್ತು ಅವರ ಪತ್ನಿಯನ್ನು ಪೊಲೀಸ್‌ನವರು ವಿನಾಕಾರಣ ಅರೆಸ್ಟ್ ಮಾಡಿದ್ದಾರೆ. ಈಗಾಗಲೇ ನಾವು DSP ಯವರಿಂದ ತನಿಖೆ ಮಾಡಿಸಿ ಸಬ್ ಇನ್ಸ್‌ಪೆಕ್ಟರ್ ರವನ್ನು ಸಸ್ಪೆಂಡ್ ಮಾಡಿದ್ದೇವೆ. ಬಾಕಿ ಕ್ರಮ ತೆಗೆದುಕೊಳ್ಳುತ್ತೇವೆ.

viii) ವಿಷಯ: Distributoryಗಳಿಗೆ ಅನುದಾನ ಒದಗಿಸುವ ಬಗ್ಗೆ.

ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಸನ್ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಪ್ರಶ್ನೆಗೆ ನನಗೆ ಉತ್ತರ ಬಂದಿಲ್ಲ. ಆದರೆ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಚನ್ನರಾಯಪಟ್ಟಣ ತಾಲ್ಲೂಕಿನ ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೇವಲ 30% irrigated ಇದೆ.

ಅಧ್ಯಕ್ಷರು : Details ಬೇಡ. ಈ ರೀತಿ ಚರ್ಚೆ ಮಾಡುತ್ತಿದ್ದರೆ ಸಮಯವಿಲ್ಲ. ನೀವು irrigation ಬರುತ್ತದೆ, ಇಲ್ಲ ಎಂದು ಚರ್ಚೆ ಮಾಡ ಬೇಡಿ. ನನಗೆ 21 ಪ್ರಶ್ನೆಗಳಿವೆ.

ಶ್ರೀ ಸಿ.ಎನ್.ಬಾಲಕೃಷ್ಣ : ಒಂದೇ ನಿಮಿಷ ಅಧ್ಯಕ್ಷರೆ, ನನಗೆ ಉತ್ತರ ಬಂದಿಲ್ಲ. ನಮಗೆ ಶ್ರವಣಬೆಳಗೊಳ sub division ವ್ಯಾಪ್ತಿಯಲ್ಲಿ 43 ಮತ್ತು

46ನೇ distributor ಬರುತ್ತದೆ. 15 ಕಿ.ಮೀ. ದೂರ ಇದೆ. ಕೇವಲ 5 ಕಿ.ಮೀ.ಗೆ ಮಾತ್ರ ನೀರು ಸರಬರಾಜಾಗುತ್ತಿದೆ. ಕೊನೆ ಭಾಗದ ರೈತರ ಎರಡೂವರೆ ಸಾವಿರ ಎಕರೆಗೆ ನೀರು ಸರಬರಾಜಾಗುತ್ತಿಲ್ಲ. ಆದ್ದರಿಂದ distributoryಗಳಿಗೆ ಅನುದಾನ ಕೊಡಿ ಎಂದರೆ ಈ ಸಾಲಿನಲ್ಲಿ ಅನುದಾನದ ಲಭ್ಯತೆಯಿಲ್ಲ ಎಂದು ಸಂಬಂಧಪಟ್ಟ ನಮ್ಮ ಮುಖ್ಯ ಇಂಜಿನಿಯರ್ ಹಾಗೂ Executive Engıneer ಹೇಳುತ್ತಿದ್ದಾರೆ. ಆದ್ದರಿಂದ ಭಾರಿ ನೀರಾವರಿ ಸಚಿವರು ಈ ಸಾಲಿನಲ್ಲಿ ಇದಕ್ಕೆ ಅನುದಾನವನ್ನು ಕೊಟ್ಟು ಅಭಿವೃದ್ಧಿಪಡಿಸಿ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂತೆ ನಾನು ಎಂ.ಡಿ. ಕಾವೇರಿ ನೀರಾವರಿ ನಿಗಮದವರಿಗೆ ಹೇಳುತ್ತೇನೆ. ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ.

IX) ವಿಷಯ: ಗೃಹ ಸಚಿವರ ಸ್ವಕ್ಷೇತ್ರ ಮತ್ತು ಬೆಂಗಳೂರಿನ ವಿವಿಧೆಡೆ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಯನ್ನು ಗೃಹ ಸಚಿವರಿಗೆ ಕೊಟ್ಟಿದ್ದೆನು. ಒಂದು ಸೈಬರ್ ಅಪರಾಧದ ಬಗ್ಗೆ.

ಅಧ್ಯಕ್ಷರು : ಈಗ ಬಂದಿರುವುದು ಸರ್ವಜ್ಞ ನಗರದ ವಿಷಯ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಸರ್ವಜ್ಞ ನಗರದ ವಿಧಾನಸಭಾ ಕ್ಷೇತ್ರದಲ್ಲಿ ಬಾಂಗ್ಲಾ ದೇಶದ ಅಕ್ರಮ ವಲಸಿಗರು ನೆಲೆಸಿರುವ ಬಗ್ಗೆ ನಿನ್ನೆ ರಾಜ್ ಟಿ.ವಿ.ಯಲ್ಲಿ telecast ಆಗುತ್ತಿತ್ತು. ದೊಡ್ಡ ಚರ್ಚೆ ಸಹ ಆಗುತ್ತಿತ್ತು. ಅವರ hidden cameraದಲ್ಲಿ ಅದನ್ನು interview ಮಾಡಿದ್ದಾರೆ. ಹಾಗಾಗಿ, ಗೃಹ ಸಚಿವರ ಸ್ವ ಕ್ಷೇತ್ರದಲ್ಲಿ ಹಾಗೂ ಇಡೀ ಬೆಂಗಳೂರಿನಲ್ಲಿದ್ದಾರೆ ಎನ್ನುವಂಥ ಮಾಹಿತಿ ಇದೆ. ದೇಶದ ಭದ್ರತೆಗೆ ಅಪಾಯವಿರುತ್ತದೆ. ಈ ಬಗ್ಗೆ ಇಲಾಖೆ ಯಿಂದ ಅವರನ್ನು ಪತ್ತೆ ಹಚ್ಚುವುದಕ್ಕೆ ಹಾಗೂ ದೇಶದಿಂದ ಹೊರಗೆ ಕಳುಹಿಸು ವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ?